ಶ್ರೀ ಜೆ. ಎಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಮತ್ತು ಆ) ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್‌ನ್ನು ಕೇವಲ ಹಿರಿತನದ ಆಧಾರದ ಮೇಲೆ ಒದಗಿಸಲಾಗುತ್ತಿಲ್ಲ. ಅರ್ಜಿಗಳನ್ನು ಅನುಬಂಧದಲ್ಲಿ ತೋರಿಸಿರುವಂತೆ ವರ್ಗೀಕರಣ ಮಾಡಿ ವಿದ್ಯುತ್ತನ್ನು ಒದಗಿಸಲಾಗುತ್ತಿದೆ.

ಅನುಬಂಧ

ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸುವಲ್ಲಿನ ಆದ್ಯತೆ ನಿಗದಿ ಮಾಡುವ ಬಗ್ಗೆ ವಿವರಗಳು ಈ ಕೆಳಕಂಡಂತಿವೆ.

ಅ) ವರ್ಗ 'ಅ' ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅರ್ಜಿದಾರರು.

ಆ) ವರ್ಗ 'ಆ' ೩೧-೩-೮೬ಕ್ಕೆ ಒಂದು ವರ್ಷಕ್ಕೂ ಮೀರಿ ಬಾಕಿ ಉಳಿದಿರುವ ಕೈಗೆತ್ತಿಕೊಳ್ಳಬೇಕಾಗಿರುವ ಎಲ್ಲಾ ಕಾರ್ಯದೇಶಗಳು (ಮಂಜೂರಾದ ಅಂದಾಜುಗಳು).

ಇ) ವರ್ಗ 'ಅ' ಇದನ್ನು 'ಅ-೧' ಮತ್ತು ಅ-೨ ಎಂದು ಪುನರ್ವಿಂಗಡಿಸಬೇಕು.

(೧) ವರ್ಗ 'ಅ-೧'

ಒಂದರಿಂದ ೫ ಕಂಬುಗಳವರೆಗೆ ಬೇಕಾಗುವ ಎಲ್ಲಾ ಪರಿಶಿಷ್ಟ ಜಾತಿ ಮತ್ತು ವರ್ಗಗಳೇತರ ಅರ್ಜಿಗಳು. ೩ ಅಂದಾಜುಗಳು

(೨) ಆರು ಮತ್ತು ಅದಕ್ಕೂ ಹೆಚ್ಚಿನ ಕಂಬುಗಳು ಬೇಕಾಗುವ ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳೇತರ ಅರ್ಜಿಗಳು. ೧ ಅಂದಾಜು

ಬಿಜಾಪುರ ಜಿಲ್ಲೆಯಲ್ಲಿ ನೆಡಲಾಗಿರುವ ಗಿಡಗಳು

೨೦೬೨(ಡಿ) ಶ್ರೀ ಎಸ್. ಎಸ್. ಪೀಡ (ಇಂಡಿ).—ಮಾನ್ಯ ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರಸಕ್ತ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ರಾಜ್ಯದಲ್ಲಿ ನೆಟ್ಟ ಸಸಿಗಳ ಸಂಖ್ಯೆ ಎಷ್ಟು ?

ಆ) ಬಿಜಾಪುರ ಜಿಲ್ಲೆಯಲ್ಲಿ ಎಷ್ಟು ಗಿಡಗಳನ್ನು ನೆಡಲಾಯಿತು ?

ಇ) ಈ ಅವಧಿಯಲ್ಲಿ ಬಿಜಾಪುರ ಜಿಲ್ಲೆಗೆ ಖರ್ಚು ಮಾಡಿದ ಹಣವೆಷ್ಟು ?

ಈ) ಜಿಲ್ಲೆಯಲ್ಲಿ ಜೀವಂತವಿರುವ ಗಿಡಗಳ ಸಂಖ್ಯೆ ಎಷ್ಟು ?

ಉ) ಜಿಲ್ಲೆಯಲ್ಲಿ ವನ ಬೆಳೆಸುವ ಕಾರ್ಯಕ್ರಮ ಪ್ರಗತಿದಾಯಕ ಹಾಗೂ ಸಮಾಧಾನಕರ ವಾಗಿದೆಯೇ ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ)

೧೯೮೫-೮೪	೨೨೫೪.೮೮ ಲಕ್ಷ
೧೯೮೪-೮೫	೨೩೦೨.೫೫ ಲಕ್ಷ
೧೯೮೫-೮೬	೨೭೨೫.೬೪ ಲಕ್ಷ
೧೯೮೬-೮೭	೨೨೬೧.೦೪ ಲಕ್ಷ

(ಬೇರು ಬಿಟ್ಟಿರುವ ಸಸಿಗಳನ್ನು ಬಿಟ್ಟು)

ಆ)	೧೯೮೩-೮೪	೫೯.೦೩ ಲಕ್ಷ
	೧೯೮೪-೮೫	೧೩೩.೬೧ ಲಕ್ಷ
	೧೯೮೫-೮೬	೧೦೫.೩೧ ಲಕ್ಷ
	೧೯೮೬-೮೭	೧೦೪.೬೪ ಲಕ್ಷ
ಇ)	೧೯೮೩-೮೪	ರೂ. ೧೩೩.೧೩ ಲಕ್ಷ
	೧೯೮೪-೮೫	ರೂ. ೧೦೫.೪೩ ಲಕ್ಷ
	೧೯೮೫-೮೬	ರೂ. ೧೩೦.೬೫ ಲಕ್ಷ
	೧೯೮೬-೮೭	ರೂ. ೧೦೭.೦೮ ಲಕ್ಷ

(೨೮-೨-೮೭ರ ವರೆಗೆ).

ಈ) ಜೀವಂತವಾಗಿರುವ ಗಿಡಗಳ ಸಂಖ್ಯೆ ಸುಮಾರು ೧೦೦ಕ್ಕೆ ೫೦ ಇರುತ್ತೆ. ಇನ್ನೂ ನಿವ್ವಳ ಸಂಖ್ಯೆ ಬೇಕಾದರೆ ಅದನ್ನು ಕಂಡುಹಿಡಿಯಲು ಕಾಲಾವಕಾಶ ಬೇಕಾಗುತ್ತದೆ. ಕಳೆದ ನಾಲ್ಕು ವರ್ಷಗಳಿಂದ ಜಿಲ್ಲೆಯಲ್ಲಿ ಬರಗಾಲವಿರುವುದರಿಂದ ನೆಡುತೋಪುಗಳಲ್ಲಿ ಜೀವಿತ ಸಸಿಗಳ ಸಂಖ್ಯೆ ಕಡಿಮೆ ಇದೆ.

ಉ) ಜಿಲ್ಲೆಯಲ್ಲಿ ವನ ಬೆಳೆಸುವ ಕಾರ್ಯಕ್ರಮ ಪ್ರಗತಿದಾಯಕ ಹಾಗೂ ಸಮಾಧಾನಕರವಾಗಿದೆ.

ಅಫ್ಜಲ್‌ಪುರ ತಾಲ್ಲೂಕಿನಲ್ಲಿ ಕಡಿಮೆ ವೋಲ್ಟೇಜಿನ ಸ್ಥಿತಿ

೨೦೧೪. ಶ್ರೀ ಮಾಲಿಕಯ್ಯ ಗುತ್ತೇದಾರ್ (ಅಫ್ಜಲ್‌ಪುರ).—ಮಾನ್ಯ ವಾಣಿಜ್ಯ, ಕೈಗಾರಿಕೆ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಅಫ್ಜಲ್‌ಪುರ ತಾಲ್ಲೂಕಿನಲ್ಲಿ ಭೀಮಾನದಿಯು ಹರಿಯುತ್ತಿದ್ದು ಈ ನದಿಯ ಪಕ್ಕದಲ್ಲಿರುವ ರೈತರಿಗೆ ೧೧ ಕೆ.ವಿ. ವಿದ್ಯುತ್ ಪಡೆಯಲು ನದಿಯ ಉದ್ದಕ್ಕೂ ಸುಮಾರು ೩೦ ಕಿ.ಮೀ. ನಂತೆ ಎರಡು ಭಾಗಗಳನ್ನು ಮಾಡಿ ಒಟ್ಟು ೬೦ ಕಿ. ಮೀ. ತಂತಿ ಎಳೆಯಲು ಸರ್ಕಾರ ಕ್ರಮಕೈಗೊಳ್ಳುವರೆ?

ಆ) ಅಫ್ಜಲುರದಿಂದ ಮಣೂರಿಗೆ ೭೫ ಕಿ. ಮೀ. ಅಂತರದಿಂದ ವಿದ್ಯುತ್ ಸರಬರಾಜು ಆಗುತ್ತಿರುವುದರಿಂದ ಅಲ್ಲಿಯ ಗ್ರಾಮಗಳಿಗೆ ಮತ್ತು ರೈತರಿಗೆ ಸರಿಯಾಗಿ ವಿದ್ಯುತ್ ದೊರಕದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಕರಜಗಿಯಲ್ಲಿ ೫೫ ಕೆವಿ ಸಬ್‌ಸ್ಟೇಷನ್ ಮಂಜೂರು ಆಗಿದ್ದರೂ, ಇಲ್ಲಿಯವರೆಗೆ ಕೆಲಸವಾಗದೆ ಇರಲು ಕಾರಣವೇನು, ಹಾಗೂ ಈ ಕೆಲಸ ಯಾವಾಗ ಪೂರ್ತಿ ಆಗುವುದು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು),—

ಆ) ಗ್ರಾಹಕರಿಗೆ ಅವಶ್ಯವಿದಷ್ಟು ಲೈನ್‌ನ್ನು ಹಾಕಿರುವುದರಿಂದ ನದಿ ಪಕ್ಕದಲ್ಲಿ ವಿದ್ಯುತ್ ಮಾರ್ಗವನ್ನು ಈಗ ಹೊಸದಾಗಿ ಹಾಕುವುದು ಅವಶ್ಯಕತೆಯಿಲ್ಲ.

ಆ) ಮಣೂರಿಗೆ ಬರುವ ಲೈನು ಸುಮಾರು ೩೦ ಕಿ. ವಿ. ಉದ್ದವಿದ್ದು ನೀರಾವರಿ ಪಂಪುಸೆಟ್ಟುಗಳ ಲೋಡ್ ಇರುವುದರಿಂದ ಸಮರ್ಪಕವಾಗಿ ವೋಲ್ಟೇಜ್ ಇಲ್ಲದಿರುವುದು ಗಮನಕ್ಕೆ ಬಂದಿದೆ.

ಚಳ್ಳಕೆರೆ ತಾಲ್ಲೂಕಿನಲ್ಲಿ ಬಾವಿಗಳಿಗೆ ವಿದ್ಯುತ್ ಪೂರೈಸುವ ಬಗ್ಗೆ

೧೬೯೦. ಶ್ರೀ ತಿಪ್ಪೆಸ್ವಾಮಿ,—ಮಾನ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ೧೯೮೫-೮೬ರಲ್ಲಿ ಚಳ್ಳಕೆರೆ ತಾಲ್ಲೂಕಿನಲ್ಲಿ ಎಷ್ಟು ಬಾವಿಗಳಿಗೆ ವಿದ್ಯುಚ್ಛಕ್ತಿ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ?